ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಸಿಸಿ 1012/2017 ಪಿಡಬ್ಲ್ಯೂ-1

ದಿನಾಂಕಃ-23-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರುಃ ಶ್ರೀ.ಸಿಎಸ್ ರವರಿಂದ**

ಮಂಡ್ಯದ ಹಾಲು ಉತ್ಪಾದಕರ ಸಹಕಾರ ಸಂಘ ಸಹಕಾರಿ ಸಂಘದ ಕಾಯಿದೆ ಅಡಿಯಲ್ಲಿ ನೊಂದಣಿಯಾಗಿದೆ ಎಂದರೆ ಸರಿ.ಅದಕ್ಕೆ ಒಂದು ಆಡಳಿತ ಮಂಡಳಿ ಇದೆ ಎಂದರೆ ಸರಿ. ಅದು ಕರ್ನಾಟಕ ಸಹಕಾರಿ ಸಂಘಗಳ ಬೈಲಗಳ ಅಡಿಯಲ್ಲಿ ನೊಂದಣಿಯಾಗಿದೆ ಎಂದರೆ ಸರಿ. ಅದರಲ್ಲಿ ನಮ್ಮ ಅಧಿಕಾರದ ವ್ಯಾಪ್ತಿ ತಿಳಿಸಲಾಗಿದೆ. ಆ ಬೈಲದ ಪ್ರಕಾರ ದೂರನ್ನು ಮತ್ತು ಕ್ರಿಮಿನಲ್ ಪ್ರಕರಣವನ್ನು ನಮಗೆ ದಾಖಲು ಮಾಡಲು ಅಧಿಕಾರವಿಲ್ಲ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯ ಬೈಲವನ್ನು ದೂರಿನ ಜೊತೆ ಕೊಟ್ಟಿಲ್ಲ. ನನಗೆ ದೂರು ಕೊಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಧಿಕಾರದ ಅವಧಿಯಲ್ಲಿ ಆರೋಪಿಯ ನೇಮಕ ಆಗಿಲ್ಲ ಎಂದರೆ ಸರಿ. ಆ ಸಂಧರ್ಭದಲ್ಲಿ ಮಂಡ್ಯದ ಹಾಲು ಉತ್ಪಾದಕರ ಸಹಕಾರ ಸಂಘದ ಎಂಡಿ ಕೃಷ್ಣೇಗೌಡ ಎಂಬುವವರು ಆಗಿದ್ದರು. ನಾನು ಬಂದಂತಹ ಸಮಯದಲ್ಲಿ ಆರೋಪಿಯ ದಾಖಲೆಗಳನ್ನು ನೋಡಿರಲಿಲ್ಲ. ದೂರನ್ನು ದಾಖಲಿಸುವ ಸಮಯದಲ್ಲಿ ನೋಡಿರುತ್ತೇನೆ. ಯಾವುದೇ ವ್ಯಕ್ತಿಯನ್ನು ನೇಮಕಾತಿ ಮಾಡುವಾಗ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸುತ್ತೆವೆಂದರೆ ಸರಿ. ಆಗ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುತ್ತಾರೆಂದರೆ ಸರಿ. ಅರ್ಜಿಯ ಜೊತೆ ದಾಖಲೆಗಳ ದೃಡೀಕೃತ ನಕಲುಗಳನ್ನು ಸಲ್ಲಿಸುತ್ತಾರೆಂದರೆ ಸರಿ. ನಂತರದಲ್ಲಿ ಅರ್ಜಿದಾರರುಗಳನ್ನು ಸಂದರ್ಶನಕ್ಕೆ ಬರ ಹೇಳುತ್ತೆವೆಂದರೆ ಸರಿ. ಸಂದರ್ಶನದ ಸಮಯದಲ್ಲಿ ಮೂಲ ದಾಖಲೆಗಳನ್ನು ತರಲು ಹೇಳುತ್ತೆವೆಂದರೆ ಸರಿ. ಮೂಲ ದಾಖಲೆಗಳನ್ನು ಮತ್ತು ಅರ್ಜಿ ಸಲ್ಲಿಸುವ ಸಮಯದಲ್ಲಿ ಸಲ್ಲಿಸಿದ ದಾಖಲೆಗಳನ್ನು ಮತ್ತು ಎರಡನ್ನು ಸಹ ಪರಿಶೀಲಿಸುತ್ತೆವೆ. ನಂತರದಲ್ಲಿ ಎರಡು ದಾಖಲೆಗಳನ್ನು ಪರಿಶೀಲನೆ ಮಾಡಿ ಸರಿ ಇದ್ದರೆ ಸರಿ ಇರುವ ಬಗ್ಗೆ ಹಿಂಬರಹ ಬರೆಯುತ್ತೆವೆಂದರೆ ಸರಿ. ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ಕಳುಹಿಸುತ್ತೇವೆಂದರೆ ಸರಿ. ನಂತರದಲ್ಲಿ ಮೂಲ ದಾಖಲೆಗಳನ್ನು ನಾವೇ ಇಟ್ಟುಕೊಂಡಿರುತ್ತೇವೆಂದರೆ ಸರಿ. ಅಭ್ಯರ್ಥಿಗಳ ಸೇವಾ ಪುಸ್ತಕದಲ್ಲಿ ಮೂಲ ದಾಖಲೆಗಳ ಬಗ್ಗೆ ನಮೂದು ಮಾಡುತ್ತೇವೆಂದರೆ ಸರಿ.

ಆರೋಪಿ 2 ರವರು ಜೂನಿಯರ್ ಸಿಸ್ಟಮ್ ಆಪರೇಟರ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು. ಅದರ ಅರ್ಹತೆ ಬಿಎ ಪದವಿ ಆಗಬೇಕಿತ್ತು. ನಾನು ಅಧಿಕಾರ ವಹಿಸಿಕೊಳ್ಳುವ ಸಮಯದಲ್ಲಿ ಆರೋಪಿ 2 ರವರನ್ನು ಕೆಲಸದಿಂದ ತೆಗೆದು ಹಾಕಿದ್ದರು, ನಾನು ನಂತರದಲ್ಲಿ ಆರೋಪಿ 2 ರವರ ವಿರುದ್ಧ ದೂರನ್ನು ಕೊಟ್ಟಿರುತ್ತೇನೆ. ಹಿಂದಿನ ವ್ಯವಸ್ಥಾಪಕ ನಿರ್ದೇಶಕರು 2 ನೇ ಆರೋಪಿಯ ಮೂಲ ದಾಖಲೆಗಳನ್ನು ಮತ್ತು ವರದಿಯನ್ನು ತರಿಸಿಕೊಂಡಿದ್ದರು. ಹಿಂದಿನ ವ್ಯವಸ್ಥಾಪಕ ನಿರ್ದೇಶಕರು 2 ನೇ ಆರೋಪಿಯ ಯಾವ ದಾಖಲೆಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆಂದು ನನಗೆ ಖುದ್ದು ಮಾಹಿತಿ ಇಲ್ಲ. ಪೊಲೀಸರಿಗೆ 2 ನೇ ಆರೋಪಿಯ ಎಲ್ಲಾ ಮೂಲ ದಾಖಲೆಗಳನ್ನು ಕೊಟ್ಟಿರುತ್ತೇನೆ. ಮಹಜರ್ ಸಮಯದಲ್ಲಿ 2 ನೇ ಆರೋಪಿಗೆ ಸೇರಿದ 11 ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಮಹಜರ್ ನ್ನು ಪೊಲೀಸರು ಪೋಲೀಸ್ ಠಾಣೆಯಲ್ಲಿ ಮಾಡಿರುತ್ತಾರೆ. ನಂತರ ಪೊಲೀಸರು ನನ್ನಿಂದ ಯಾವುದೇ ದಾಖಲೆಗಳನ್ನು ಪಡೆದಿಲ್ಲ. 2 ನೇ ಆರೋಪಿಯು ತನ್ನ ಎಲ್ಲಾ ಮೂಲ ದಾಖಲೆಗಳನ್ನು ನೀಡಿ ಕೆಲಸಕ್ಕೆ ಸೇರಿದ್ದರು ಎಂದರೆ ಸರಿ. 2 ನೇ ಆರೋಪಿಯು ತನ್ನ ಎಲ್ಲಾ ಮೂಲ ದಾಖಲೆಗಳನ್ನು ನೀಡಿ ಕೆಲಸಕ್ಕೆ ಸೇರಿದ್ದರೂ ಸಹ ನಾನು ಆರೋಪಿ ನಕಲಿ ದಾಖಲೆಗಳನ್ನು ನೀಡಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಒ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಸಾಕ್ಷಿ ಸಹಿ

ಜೆ ಎಂ ಎಫ್ ಸಿ, ಮದ್ದೂರು.